# ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ–Pre-Primary Teacher Education

ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯು, ಪ್ರಾಥಮಿಕ ಶಿಕ್ಷಣದ ಪೂರ್ವದಲ್ಲಿ ಶಾಲೆಗೆ ದಾಖಲಾಗುವ ಮಕ್ಕಳನ್ನು ಯಾವರೀತಿ ಬೆಳಸಬೇಕು, ಯಾವರೀತಿ ವಿಷಯಗಳನ್ನು ಗ್ರಹಿಸುವಂತೆ ಮಾಡಬೇಕು.ಮಕ್ಕಳು ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ ಆಟ ಪಾಠಗಳ ಮುಖಾಂತರ ಮಕ್ಕಳನ್ನು ಬೋಧನಾಅಭ್ಯಾಸದಕಲಿಕೆಯಕಡೆಗೆಅಕರ್ಷಿಸುವಕಲೆಯನ್ನು ಶಿಕ್ಷಕರಿಗೆ ನೀಡುವಒಂದು ವರ್ಷದಅವಧಿಗೆ ಪೂರ್ವ ಪ್ರಾಥಮಿಕ ಶಿಕ್ಷಣದ ತರಬೇತಿ ನೀಡಲಾಗುತ್ತದೆ. ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯು ಸರ್ಕಾರಿಆದೇಶ ಸಂಖ್ಯೆ:ಇಡಿ.34.ಪಿ.ಟಿ.ಐ.77; ದಿನಾಂಕ:12.12.1978ರಿಂದಜಾರಿಗೆ ಬಂದಿರುತ್ತದೆ.

ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಎನ್.ಸಿ.ಟಿ.ಇ ಅನುಮತಿ ಮತ್ತು ಮಾನ್ಯತೆ ನೀಡುವ ಹಾಗೂ ದಾಖಲಾತಿ ಮಿತಿ ನಿಗಧಿಪಡಿಸುವ ಸಕ್ಷಮ ಪ್ರಾಧಿಕಾರವಾಗಿದೆ.ಜಿಲ್ಲಾ ಮಟ್ಟದಲ್ಲಿಡಯಟ್ ಪ್ರಾಂಶುಪಾಲರು, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯ ಕಾಲೇಜುಗಳ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಕ್ಷಮ ಅಧಿಕಾರಿಗಳಾಗಿರುತ್ತಾರೆ. ಪಠ್ಯ ಪುಸ್ತಕ ರಚನೆ, ಪರಿಷ್ಕೃತ ಪಠ್ಯವಸ್ತುತಯಾರಿಕೆ, ಪ್ರಶ್ನೆ ಪತ್ರಿಕೆ ನೀಲಿನಕಾಶೆ Scheme of Valuation, ಶೈಕ್ಷಣಿಕ ವೇಳಾಪಟ್ಟಿ ತಯಾರಿಕೆ, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಸಂಸ್ಥೆಗಳ ಮಾಧ್ಯಮ, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯ ಸಂಸ್ಥೆಗಳನ್ನು ಅನುದಾನಕ್ಕೊಳಪಡಿಸುವ, ಅನುದಾನ ಬಿಡುಗಡೆ ಮಾಡುವ, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಸಂಸ್ಥೆಗಳು ನಡೆಯುತ್ತಿರುವ ಬಗ್ಗೆ ಪರಿಶೀಲಿಸುವ, ತಪಾಸಣೆ, ಶಿಕ್ಷಕರಿಗೆ ತರಬೇತಿ, ಪುನಃಶ್ಚೇತನಕಾರ್ಯಗಾರ, ಡಯಟ್ ಪ್ರಾಂಶುಪಾಲರಿಗೆತರಬೇತಿ, ಆಂತರಿಕ ಬೋಧನಾಅಭ್ಯಾಸ, ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಪರೀಕ್ಷೆಗೆ ಸಂಬಂಧಿಸಿದಂತೆ, ಪಠ್ಯಪುಸ್ತಕತಯಾರಿಕೆ, ಗರಿಷ್ಠ ಮತ್ತು ಕನಿಷ್ಠ ಅಂಕಗಳ ನಿಗಧಿ, ವರ್ಗಾವಣೆ ಇತ್ಯಾದಿಗಳ ನಿಯಮಗಳನ್ನು ರೂಪಿಸುವ ಸಮಗ್ರ ಆಡಳಿತಾತ್ಮಕ ನಿರ್ವಹಣೆಯ ಸಕ್ಷಮ ಪ್ರಾಧಿಕಾರರಾಜ್ಯ ಶಿಕ್ಷಣ ಸಂಶೋಧನೆಮತ್ತುತರಬೇತಿ ನಿರ್ದೇಶನಾಲಯ, ಬೆಂಗಳೂರುರವರಾಗಿರುತ್ತಾರೆ.

- **ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯಉದ್ದೇಶ:–**

**(ಎ)ಸಾಮಾನ್ಯ:–**

1. ಶಿಕ್ಷಕರನ್ನು ಪೂರ್ವ ಪ್ರಾಥಮಿಕಶಿಕ್ಷಣ ಸುಗಮಕಾರರಾಗಿ ಸಿದ್ದಪಡಿಸುವುದು.
2. ಆರು ವರ್ಷದ ಒಳಗಿನ ಮಕ್ಕಳಲ್ಲಿ ಜ್ಞಾನ ಮತ್ತುಅರ್ಥೈಸುವಿಕೆಯನ್ನುಅಭಿವೃದ್ಧಿ ಪಡಿಸುವುದು.
3. ಆರು ವರ್ಷದ ಮಕ್ಕಳಲ್ಲಿ ಸರ್ವತೋಮುಖಅಭಿವೃದ್ಧಿಗೆ ಬೇಕಾದಅಗತ್ಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.
4. ಸರಿಯಾದ ಮಾರ್ಗದಲ್ಲಿ ಒಳ್ಳೆಯ ಪ್ರವೃತ್ತಿಅಭಿವೃದ್ಧಿ ಪಡಿಸಿಕೊಳ್ಳುವಂತೆ ಮಕ್ಕಳಲ್ಲಿ ಇರುವ ಮನೋಭಾವವನ್ನುಮಾರ್ಪಾಡು ಮಾಡುವಲ್ಲಿ ಪ್ರಭಾವ ಬೀರುವುದು.

(ಬಿ) **ಜ್ಞಾನ ಮತ್ತುಅರ್ಥೈಸುವುದು:–**

**ಶಿಕ್ಷಕರ ಜ್ಞಾನ ಮತ್ತುಅರ್ಥೈಸುವಿಕೆಗೆ ಸಹಾಯ ಮಾಡುವುದು.**

1. ಆರು ವರ್ಷದೊಳಗಿನ ಮಕ್ಕಳ ಅಭಿವೃದ್ಧಿ.
2. ಬಾಲ್ಯ ಶಿಕ್ಷಣದ ವಿಧಾನಗಳು.
3. ಪೂರ್ವ ಪ್ರಾಥಮಿಕ ಶಾಲೆಯ ಸಂಘಟನೆ.
4. ಮಗುವಿನ ಆರೋಗ್ಯ ಮತ್ತು ಪೌಷ್ಠಿಕತೆ.

**(ಸಿ)ಕೌಶಲ್ಯಗಳು:–**

**ಪ್ರಶಿಕ್ಷಣಾರ್ಥಿಗಳಲ್ಲಿ ಈ ಕೆಳಗಿನ ಕೌಶಲ್ಯಗಳನ್ನು ಬೆಳೆಸುವುದು.**

1. **ಮಕ್ಕಳನ್ನು ಅವಲೋಕಿಸುವ ಕೌಶಲ್ಯ**
   ಎ) ಸಾಮಾನ್ಯ ಬೆಳವಣಿಗೆ.
   ಬಿ) ಭಾವೋದ್ವೇಗಗಳ ಸಮಸ್ಯೆಗಳು.
2. **ಸಂವಹನ ಕೌಶಲ್ಯಗಳು**
   ಎ) ಭಾಷೆ
   ಬಿ) ಚಿಹ್ನೆಗಳು
   ಸಿ) ಉದಾಹರಣೆಗಳು
3. **ಸಾಮಾಜಿಕ ಕೌಶಲ್ಯಗಳು**
   ಎ) ಸಮುದಾಯದೊಂದಿಗೆ ಸಂಪರ್ಕ
   ಬಿ) ನಾಯಕತ್ವದ ಚಟುವಟಿಕೆಗಳು
4. **ಕೈಚಳಕದ ಕೌಶಲ್ಯಗಳು**
   ಎ) ಆಟಿಕೆಗಳನ್ನು ಬಳಸುವ ಕೌಶಲ್ಯ.
   ಬಿ) ಪರಿಸರದಲ್ಲಿರುವ ವೈವಿಧ್ಯತೆಯ ಬಗ್ಗೆ ಅರಿವು.
5. **ಸೃಜನಾತ್ಮಕ ಮತ್ತು ನವನವೀನ ಕೌಶಲ್ಯಗಳು**

**ಡಿ)** ಮನೋಭಾವಗಳು

**ಈ ಕೆಳಕಂಡ ಮನೋಭಾವಗಳನ್ನು ಅಭಿವೃದ್ಧಿಪಡಿಸುವುದು.**

1. ಮಕ್ಕಳ ವರ್ತನೆಯಲ್ಲಿ ವೈಜ್ಞಾನಿಕ ಮನೋಭಾವ.
2. ಮಕ್ಕಳಲ್ಲಿ ಪ್ರೀತಿ.
3. ಸೌಂದರ್ಯ ಪ್ರಜ್ಞೆ.
4. ವೃತ್ತಿ ಮತ್ತುವೃತ್ತಿಯಲ್ಲಿನ ನೈತಿಕತೆಯ ಬಗ್ಗೆ ವಾಸ್ತವಿಕತೆಯಅರಿವು.

➢ **ಪ್ರವೇಶಕ್ಕೆಅರ್ಹತೆ:**
ದ್ವಿತೀಯ ಪಿ.ಯು.ಸಿ ಅಥವಾತತ್ಸಮಾನ ಪರೀಕ್ಷೆಯಲ್ಲಿತೇರ್ಗಡೆಯಾಗಿರಬೇಕು.

- **ದಾಖಲಾತಿ ಮಿತಿ ನಿಗಧಿ:**–ದಾಖಲಾತಿ ಮಿತಿಯನ್ನು ಎನ್.ಸಿ.ಟಿ.ಇ ನಿಗಧಿಪಡಿಸುತ್ತದೆ.

**ಶೈಕ್ಷಣಿಕ ವರ್ಷದ ವೇಳಾಪಟ್ಟಿ:**– ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರು ಶೈಕ್ಷಣಿಕ ವರ್ಷದ ವೇಳಾಪಟ್ಟಿಯನ್ನು ಪ್ರಕಟಿಸುತ್ತಾರೆ. ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಶೈಕ್ಷಣಿಕ ವೇಳಾಪಟ್ಟಿ ಸಾಮಾನ್ಯವಾಗಿಜುಲೈ ತಿಂಗಳ ಎರಡನೇವಾರದಲ್ಲಿಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯತರಗತಿಗಳು ಪ್ರಾರಂಭವಾಗುತ್ತದೆ.ಮೇ ಮಾಹೆಯಅಂತ್ಯಕ್ಕೆ ವಾರ್ಷಿಕಅವಧಿ ಮುಗಿಯುತ್ತದೆ.ಒಟ್ಟು237ಕಾರ್ಯ ದಿನಗಳಾಗಿರುತ್ತದೆ.

- **ಸಂಸ್ಥೆ ಸಂಕೇತ ಮತ್ತು ನೋಂದಣಿ ಶುಲ್ಕ:**– ಸರ್ಕಾರಅಥವಾ ಎನ್.ಸಿ.ಟಿ.ಇ ಯಿಂದಅನುಮತಿ ಮತ್ತು ಮಾನ್ಯತೆ ಪಡೆದಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯಶಿಕ್ಷಣ ಸಂಸ್ಥೆಗಳು ಆಯಾಡಯಟ್ ಪ್ರಾಂಶುಪಾಲರಿಗೆ, ಸಂಸ್ಥೆಯನ್ನು ಪ್ರಾರಂಭಿಸಿರುವ ಬಗ್ಗೆ ಮಾಹಿತಿ ನೀಡಿ ನಿಗಧಿತ ನಮೂನೆಯಲ್ಲಿ, ಸಂಸ್ಥೆಯ ಸಂಕೇತ ಸಂಖ್ಯೆಯನ್ನು ಮಂಡಳಿಯಿಂದ ಪಡೆಯಬೇಕಾಗಿರುತ್ತದೆ. ಇದಕ್ಕಾಗಿ ಪ್ರಸ್ತಾವನೆಯನ್ನುಡಯಟ್ ಪ್ರಾಂಶುಪಾಲರ ಮುಖಾಂತರ ಸಲ್ಲಿಸಬೇಕಾಗಿರುತ್ತದೆ. ಮಂಡಳಿಯು ಹೊಸದಾಗಿ ಶಾಲಾ ಸಂಕೇತ ಪಡೆಯಲು ರೂ.1000/– ಶುಲ್ಕ ನಿಗಧಿಪಡಿಸಿದೆ. ಅದೇರೀತಿ ಪ್ರತಿ ವರ್ಷವು ಮಂಡಳಿಯು ಪರೀಕ್ಷಾಅಧಿಸೂಚನೆಯನ್ನು ಪ್ರಕಟಿಸುವ ಸಮಯದಲ್ಲಿ, ಪ್ರತಿಯೊಂದು ಸಂಸ್ಥೆಯು ಪರೀಕ್ಷಾ ಶುಲ್ಕದೊಂದಿಗೆ ನವೀಕರಣ ಶುಲ್ಕ ರೂ.1000/– ಪಾವತಿಸಬೇಕಾಗಿದೆ.

- **ಪರೀಕ್ಷೆಗೆತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳ ವಿವರ**

  **ಹೊಸ ಪ್ರಶಿಕ್ಷಣಾರ್ಥಿಗಳು:**– ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಗೆ ಹೊಸದಾಗಿದಾಖಲಾತಿಯಾಗಿವ್ಯಾಸಂಗ ಮಾಡಿದಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳನ್ನು ಹೊಸ ಪ್ರಶಿಕ್ಷಣಾರ್ಥಿಗಳು (RF) ಎಂದುನಮೂದಿಸಲಾಗುತ್ತದೆ.

  **ಪುನರಾವರ್ತಿತಪ್ರಶಿಕ್ಷಣಾರ್ಥಿಗಳು:**– ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಅನುತ್ತೀರ್ಣಪ್ರಶಿಕ್ಷಣಾರ್ಥಿಗಳು ಪುನಃ ಪರೀಕ್ಷೆತೆಗೆದುಕೊಂಡಾಗ, ಪುನರಾವರ್ತಿತಪ್ರಶಿಕ್ಷಣಾರ್ಥಿಗಳೆಂದು(RR) ಎಂದುನಮೂದಿಸಲಾಗುತ್ತದೆ.

  ಪ್ರಸ್ತುತ ಪರೀಕ್ಷೆಗೆಪ್ರಥಮ ಬಾರಿಗೆತೆಗೆದುಕೊಳ್ಳುವಎಲ್ಲಾಪ್ರಶಿಕ್ಷಣಾರ್ಥಿಗಳಿಗೆ ಎಲ್ಲಾ ವಿಷಯಗಳಿಗೂ ಪರೀಕ್ಷೆ ಬರೆಯಬೇಕಾಗಿದೆ.ಯಾವುದೇ ಪರೀಕ್ಷೆಯ ವಿನಾಯಿತಿಇರುವುದಿಲ್ಲ.

**ಈ ಕೆಳಕಂಡಂತೆ ಅಂಕಗಳನ್ನು ನಿಗಧಿಪಡಿಸಲಾಗಿದೆ.**

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು |
|---|---|---|---|
| 01 | ಮಗುವಿನ ಬೆಳವಣಿಗೆ | 85 | 100 |
| 02 | ಬಾಲ್ಯ ಶಿಕ್ಷಣದ ವಿಧಾನಗಳು | 86 | 100 |
| 03 | ಸಂಘಟನೆ | 87 | 100 |
| 04 | ಮಗುವಿನ ಬೆಳವಣಿಗೆ | 88 | 100 |
| 05 | ಪ್ರಾಯೋಗಿಕ | 92 | 100 |
| 06 | ಆಂತರಿಕ ಗ್ರೂಪ್–1 | 95 | 100 |
| 07 | ಆಂತರಿಕ ಗ್ರೂಪ್–2 | 96 | 100 |
| 08 | ಆಂತರಿಕ ಗ್ರೂಪ್–3 | 97 | 100 |

**ಒಟ್ಟುಗರಿಷ್ಠ ಅಂಕಗಳು 800 ನಿಗಧಿಪಡಿಸಲಾಗಿದೆ.**

- **ಪ್ರಶಿಕ್ಷಣಾರ್ಥಿಗಳಿಗೆ ಇರಬೇಕಾದ ಕನಿಷ್ಠ ಹಾಜರಾತಿ:–** ಶೈಕ್ಷಣಿಕ ವರ್ಷದಒಟ್ಟು ಕೆಲಸದ ದಿನಗಳಲ್ಲಿ ಕನಿಷ್ಠ ಶೇ.80ರಷ್ಟು ಹಾಜರಾತಿಇರಬೇಕು.

- **ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಸಂಸ್ಥೆಗಳ ಮಾಧ್ಯಮ ನಿಗಧಿ ಮತ್ತು ವಿಳಾಸ:–**
  ಸರ್ಕಾರದಿಂದ ವಿತರಿಸಲಾಗಿರುವ ನಿರಾಪೇಕ್ಷಣಾ ಪತ್ರ/ಎನ್.ಸಿ.ಟಿ.ಇ ಪ್ರಾಧಿಕಾರದ ಮಾನ್ಯತೆಆದೇಶದಲ್ಲಿ ಸಂಸ್ಥೆಯ ಮಾಧ್ಯಮವನ್ನು ನಮೂದಿಸಲಾಗಿರುವ ನಿಗಧಿಯಾದ ಮಾಧ್ಯಮವನ್ನು ಅಳವಡಿಸುವುದು ಕಡ್ಡಾಯವಾಗಿದೆ.ಮಾಧ್ಯಮ ಬದಲಾವಣೆಗೆ ಸಂಬಂಧಿಸಿದಂತೆ, ಸರ್ಕಾರದಆದೇಶವಿಲ್ಲದೆಅವಕಾಶವಿಲ್ಲ. ಎಲ್ಲಾಡಯಟ್ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಪಾಲಿಸಬೇಕಾಗಿರುವುದು.

  ಎನ್.ಸಿ.ಟಿ.ಇ ಪ್ರಾಧಿಕಾರದ ಮಾನ್ಯತೆಆದೇಶದಲ್ಲಿರುವ ಸ್ಥಳ ಮತ್ತು ವಿಳಾಸದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಸಂಸ್ಥೆಯನ್ನು ನಡೆಸಬೇಕು.ಎನ್.ಸಿ.ಟಿ.ಇ ಪ್ರಾಧಿಕಾರದಅನುಮತಿಇಲ್ಲದೇ ವಿಳಾಸ ಬದಲಾವಣೆ ಮಾಡುವಂತಿಲ್ಲ.

- **ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯಪರೀಕ್ಷೆಗಳ ವೇಳಾಪಟ್ಟಿ:–**ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಪರೀಕ್ಷೆಗಳನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತುತರಬೇತಿ ನಿರ್ದೇಶನಾಲಯಪ್ರಾಧಿಕಾರವು ನಿಗಧಿಪಡಿಸುವ ಶೈಕ್ಷಣಿಕ ವೇಳಾಪಟ್ಟಿಯಂತೆ, ಪರೀಕ್ಷೆಗಳನ್ನು ಮಂಡಳಿಯಿಂದ ನಡೆಸಲಾಗುತ್ತದೆ. ವರ್ಷದಲ್ಲಿಒಂದು ಬಾರಿ ಪರೀಕ್ಷೆ ನಡೆಸಲಾಗುತ್ತದೆ. ಪೂರಕ ಪರೀಕ್ಷೆಇರುವುದಿಲ್ಲ. ಜೂನ್/ಜುಲೈ ಮಾಹೆಯಲ್ಲಿ ಹೊಸ ಮತ್ತು ಪುನರಾವರ್ತಿತಪ್ರಶಿಕ್ಷಣಾರ್ಥಿಗಳಿಗೆಪರೀಕ್ಷೆನಡೆಸಲಾಗುತ್ತದೆ. ಪರೀಕ್ಷಾ ವೇಳಾಪಟ್ಟಿಯನ್ನು ಮತ್ತುಅಧಿಸೂಚನೆಯನ್ನುಅಂತರ್‌ಜಾಲದಲ್ಲಿ ಪ್ರಕಟಿಸಲಾಗುವುದು.

- **ಪರೀಕ್ಷಾ ಶುಲ್ಕ:–**ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಪ್ರಶಿಕ್ಷಣಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಮಂಡಳಿ ನಿಗಧಿಪಡಿಸಿದೆ.

  1. ಹೊಸ ಪ್ರಶಿಕ್ಷಣಾರ್ಥಿಗಳಿಗೆ ರೂ.700–00+ಲ್ಯಾಮಿನೇಷನ್ ಶುಲ್ಕ ರೂ.25–00 ಒಟ್ಟುರೂ.725–00
  2. ಪುನರಾವರ್ತಿತಪ್ರಶಿಕ್ಷಣಾರ್ಥಿಗಳಿಗೆ – ಅ) ಒಂದು ವಿಷಯಕ್ಕೆರೂ.200–00.
     ಆ) ಎರಡು ವಿಷಯಕ್ಕೆ ರೂ.400–00.
     ಇ) ಎರಡಕ್ಕಿಂತ ಹೆಚ್ಚು ವಿಷಯಗಳಿಗೆ ರೂ.700–00.

- **ಪರೀಕ್ಷಾ ಶುಲ್ಕ ವಿನಾಯಿತಿ:–** ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ಮತ್ತು ಪ್ರವರ್ಗ–1ರ ಪ್ರಾಶಿಕ್ಷಣಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿಇದೆ. ಆದರೆ ಲ್ಯಾಮಿನೇಷನ್ ಶುಲ್ಕ ಪಾವತಿಸಬೇಕಾಗಿದೆ. ಪರೀಕ್ಷಾ ಶುಲ್ಕ ವಿನಾಯಿತಿಇರುವಪ್ರಶಿಕ್ಷಣಾರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಸಮಾಜಕಲ್ಯಾಣಇಲಾಖೆಯಿಂದ ಪಡೆದು ಮಂಡಳಿಗೆ ಮರುಪಾವತಿಸಬೇಕಾಗಿದೆ.

- **ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯನಾಮಿನಲ್‌ರೋಲ್:–** ಮಂಡಳಿಯಿಂದ ಕಳುಹಿಸುವ ನಮೂನೆಯಲ್ಲಿಪ್ರಶಿಕ್ಷಣಾರ್ಥಿಯ ಹೆಸರು, ಪ್ರಶಿಕ್ಷಣಾರ್ಥಿಯ ತಂದೆಯ ಹೆಸರು ಮತ್ತುಪ್ರಶಿಕ್ಷಣಾರ್ಥಿಯ ತಾಯಿಯ ಹೆಸರನ್ನು ಹಾಗೂ ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ, ಮಾತ್ರ ಪರಿಗಣಿಸಲಾಗುತ್ತದೆ. ಅದರಂತೆ ಭರ್ತಿಮಾಡಬೇಕು. ಪ್ರಶಿಕ್ಷಣಾರ್ಥಿಯು ಆಯ್ಕೆ ಮಾಡಿರುವ ಮಾಧ್ಯಮ ವಿಷಯಗಳು, ಶುಲ್ಕದ ವಿವರ ಇತ್ಯಾದಿಗಳನ್ನು ನಮೂದಿಸಬೇಕು. ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರ ಸಹಿ ಮತ್ತು

ಮೊಹರುನೊಂದಿಗೆಆಯಾಜಿಲ್ಲಾಡಯಟ್ ಪ್ರಾಂಶುಪಾಲರಿಗೆ ಸಲ್ಲಿಸಬೇಕು. ಆಯಾಜಿಲ್ಲಾಡಯಟ್ ಪ್ರಾಂಶುಪಾಲರು ಅವುಗಳನ್ನು ಪರಿಶೀಲಿಸಿ ಸರಿಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮೇಲು ಸಹಿ ಮಾಡಬೇಕು.

- **ಎಂ.ಎಸ್.ಎ((Marks Statement Cum-Applications)ಪರೀಕ್ಷಾಅರ್ಜಿ:-**

1. ಅನುತ್ತೀರ್ಣರಾದಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಪ್ರಶಿಕ್ಷಣಾರ್ಥಿಗಳ ಎಂ.ಎಸ್.ಎಗಳನ್ನು ನೀಡಲಾಗುತ್ತದೆ. ಎಂ.ಎಸ್.ಎಯಲ್ಲಿ**ಫಲಿತಾಂಶ ಪಟ್ಟಿಯಲ್ಲಿರುವಂತೆಸಂಸ್ಥೆಯ ಮುಖ್ಯಸ್ಥರುಪರಿಶೀಲಿಸಿ ದೃಢೀಕರಿಸಿ ಕಳುಹಿಸಬೇಕು**.
2. ಮುದ್ರಿತಎಂ.ಎಸ್.ಎಯಲ್ಲಿಪ್ರಶಿಕ್ಷಣಾರ್ಥಿಭಾವಚಿತ್ರ ಅಂಟಿಸಿ ನಿಗಧಿತಅಂಕಣದಲ್ಲಿಪ್ರಶಿಕ್ಷಣಾರ್ಥಿಯಿಂದ ಸಹಿ ಪಡೆದುದೃಢೀಕರಿಸಿ ಮಂಡಳಿಗೆ ಸಲ್ಲಿಸುವುದು.
3. ಯಾವುದೇಪ್ರಶಿಕ್ಷಣಾರ್ಥಿಯಎಂ.ಎಸ್.ಎ ಲಭ್ಯವಿಲ್ಲದಿದ್ದಲ್ಲಿ, ಮುದ್ರಿತಎಂ.ಎಸ್.ಎಯನ್ನು ಮಂಡಳಿಯಿಂದ ಪಡೆಯತಕ್ಕದ್ದು, ಇದಕ್ಕಾಗಿ ರೂ.50/- ಶುಲ್ಕ ನಿಗಧಿಪಡಿಸಿದೆ.

- **ಚೆಕ್‌ಲಿಸ್ಟ್ ನಾಮಿನಲ್‌ರೋಲ್:-** ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಪ್ರಶಿಕ್ಷಣಾರ್ಥಿಗಳ ಮಾಹಿತಿಯು ಬಂದ ನಂತರಪರೀಕ್ಷೆ ತೆಗೆದುಕೊಳ್ಳುವ ಹೊಸ ಪ್ರಶಿಕ್ಷಣಾರ್ಥಿಗಳು ಮತ್ತು ಪುನರಾವರ್ತಿತಪ್ರಶಿಕ್ಷಣಾರ್ಥಿಗಳ ಕ್ರೋಢೀಕೃತಚೆಕ್‌ಲಿಸ್ಟ್ ನಾಮಿನಲ್‌ರೋಲ್ ತಯಾರಿಸಿ, ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಇವುಗಳಲ್ಲಿನ ಲೋಪದೋಷಗಳನ್ನು ತಿದ್ದುಪಡಿಮಾಡಿ ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಮಂಡಳಿಗೆ ಸಲ್ಲಿಸಬೇಕಾಗಿದೆ.
- **ಪರೀಕ್ಷಾ ಕೇಂದ್ರಗಳು:-** ಸಾಮಾನ್ಯವಾಗಿಪ್ರಶಿಕ್ಷಣಾರ್ಥಿಗಳ ಸಂಖ್ಯೆಗನುಗುಣವಾಗಿಜಿಲ್ಲಾ ಹಂತದಲ್ಲಿ ಮತ್ತುತಾಲ್ಲೂಕು ಹಂತದಲ್ಲಿಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಡಯಟ್ ಪ್ರಾಂಶುಪಾಲರುಆಯ್ಕೆ ಮಾಡಿ ಸೂಚಿಸುವ ಪರೀಕ್ಷಾ ಕೇಂದ್ರಗಳನ್ನು ಮಂಡಳಿ ನಿರ್ಧರಿಸುತ್ತದೆ.
- **ನೋಡಲ್ ಅಧಿಕಾರಿಗಳ ನೇಮಕ:-** ಜಿಲ್ಲಾ ಹಂತದಲ್ಲಿಆಯಾಡಯಟ್ ಪ್ರಾಂಶುಪಾಲರು ಸೂಚಿಸಿ ನೇಮಿಸುವ ಅಧಿಕಾರಿಯನ್ನುಆಯಾ ಪರೀಕ್ಷಾಕಾರ್ಯದ ನೋಡಲ್‌ಅಧಿಕಾರಿಯನ್ನಾಗಿ ನೇಮಿಸಲಾಗುವುದು. ಪರೀಕ್ಷಾ ನಾಮಿನಲ್‌ರೋಲ್ ಸಲ್ಲಿಸುವುದರಿಂದ ಮೊದಲುಗೊಂಡು, ಅಂಕಪಟ್ಟಿ ವಿತರಣೆಯವರೆಗೂ ವಿವಿಧ ಹಂತಗಳ ಮಾಹಿತಿಯನ್ನು ನೀಡುವ ಮತ್ತುಉಸ್ತುವಾರಿಯನ್ನು ನೋಡಲ್ ಅಧಿಕಾರಿಗಳಿಗೆ ವಹಿಸಿರುತ್ತಾರೆ. ಡಯಟ್ ಪ್ರಾಂಶುಪಾಲರು ನೋಡಲ್ ಅಧಿಕಾರಿಗಳ ಸಹಯೋಗದೊಂದಿಗೆಕಾರ್ಯ ನಿರ್ವಹಿಸಬೇಕಾಗಿರುತ್ತದೆ.
- **ಪರೀಕ್ಷಾ ಕೇಂದ್ರಗಳಿಗೆ ಮುಖ್ಯಅಧೀಕ್ಷಕರು ಮತ್ತುಅಭಿರಕ್ಷಕರ ನೇಮಕ:-** ಪ್ರತಿಯೊಂದು ಪರೀಕ್ಷಾಕೇಂದ್ರಕ್ಕೂಡಯಟ್ ಪ್ರಾಂಶುಪಾಲರಿಂದ ಸೂಚಿಸುವ ಮುಖ್ಯಅಧೀಕ್ಷಕರು ಹಾಗೂ ಅಭಿರಕ್ಷಕರನ್ನು ಮಂಡಳಿ ನೇಮಿಸುತ್ತದೆ.ಮುಖ್ಯಅಧೀಕ್ಷಕರುತಮ್ಮ ಪರೀಕ್ಷಾಕೇಂದ್ರದ ಸಂಪೂರ್ಣಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ಬಗ್ಗೆ ಮುಖ್ಯಅಧೀಕ್ಷಕರು, ಅಭಿರಕ್ಷಕರು ನಿರ್ವಹಿಸಬೇಕಾಗಿರುವಕಾರ್ಯದ ಸಂಪೂರ್ಣ ವಿವರಗಳನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸಲಾಗುವುದು. (ಸುತ್ತೋಲೆಗಳ ಮಾದರಿಯನ್ನು ಮುಂದೆ ನೀಡಿದೆ.)
- **ಬಾಹ್ಯ ಪರೀಕ್ಷೆಗಳನ್ನು ಮಂಡಳಿ ನಡೆಸುತ್ತದೆ. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳು ರಾಜ್ಯ ಶಿಕ್ಷಣ ಸಂಶೋಧನೆ ಮತ್ತುತರಬೇತಿ ನಿರ್ದೇಶನಾಲಯ ಹೊರಡಿಸುವ ಸುತ್ತೋಲೆಯಂತೆ, ಪರೀಕ್ಷೆ ನಡೆಸಬೇಕಾಗುತ್ತದೆ.**

- **ಪರೀಕ್ಷಾ ವೇಳಾಪಟ್ಟಿ:–** ಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯಬಾಹ್ಯ ಪರೀಕ್ಷೆಗಳ, ಜೂನ್–2015ರ ಪರೀಕ್ಷಾ ವೇಳಾಪಟ್ಟಿ (ಅನುಬಂಧದಲ್ಲಿ ನೀಡಲಾಗಿದೆ)
- **ಪ್ರವೇಶ ಪತ್ರ:–**ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಸಂಸ್ಥೆಗಳಿಂದ ಬಂದ ನಂತರ, ಅವುಗಳಲ್ಲಿನ ತಿದ್ದುಪಡಿಗಳನ್ನು ಮಂಡಳಿ ಅಳವಡಿಸಿ ಪ್ರಶಿಕ್ಷಣಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಮುದ್ರಿಸಿ ನೀಡಲಾಗುತ್ತದೆ. ಪರೀಕ್ಷಾ ವೇಳಾಪಟ್ಟಿ ಸಲ್ಲಿಸಲಾಗುತ್ತದೆ ಹಾಗೂ ಪ್ರವೇಶ ಪತ್ರಗಳನ್ನು ಕಳುಹಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲಾಗುತ್ತದೆ. ಪ್ರವೇಶ ಪತ್ರಗಳಲ್ಲಿ ತಿದ್ದುಪಡಿಗಳಿದ್ದಲ್ಲಿ, ಪ್ರವೇಶ ಪತ್ರದಛಾಯಾ ಪ್ರತಿಯ ಮೇಲೆ ಕೆಂಪು ಶಾಹಿಯಲ್ಲಿತಿದ್ದುಪಡಿ ಮಾಡಿ, ಒಂದು ವೇಳೆ ಮಾಧ್ಯಮ ಬದಲಾವಣೆಇದ್ದಲ್ಲಿ, ವಿಷಯಗಳ ಬದಲಾವಣೆಯಿದ್ದಲ್ಲಿ, ಪ್ರಶಿಕ್ಷಣಾರ್ಥಿಯಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ ಮತ್ತು ಭಾವಚಿತ್ರ ಇತ್ಯಾದಿಗಳ ವ್ಯತ್ಯಾಸವಿದ್ದಲ್ಲಿಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ.
- **ಪರೀಕ್ಷಾಕೇಂದ್ರವಾರು ನಾಮಪಟ್ಟಿತಯಾರಿಕೆ:–**ಆಯಾ ಪರೀಕ್ಷಾಕೇಂದ್ರವಾರು ತೆಗೆದುಕೊಳ್ಳುವ ಪ್ರಶಿಕ್ಷಣಾರ್ಥಿಗಳ ಹೆಸರು ಮತ್ತಿತರೆ ವಿವರಗಳನ್ನೊಳಗೊಂಡ ಭಾವಚಿತ್ರವಿರುವ ಸಿ.ಎನ್.ಆರ್‌ಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಪ್ರವೇಶ ಪತ್ರದಲ್ಲಿರುವ ಭಾವಚಿತ್ರವು, ಸಿ.ಎನ್.ಆರ್‌ನಲ್ಲಿರುವ ಭಾವಚಿತ್ರ ಮತ್ತುಪ್ರಶಿಕ್ಷಣಾರ್ಥಿಯ ಸಹಿಯನ್ನುಒಂದಕ್ಕೊಂದು ತಾಳೆ ಮಾಡಿ, ಪ್ರವೇಶ ಪತ್ರವನ್ನು ಹಾಜರುಪಡಿಸುವಪ್ರಶಿಕ್ಷಣಾರ್ಥಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಬೇಕಾಗಿದೆ.
- **ಪರೀಕ್ಷಾ ಕೇಂದ್ರಗಳಲ್ಲಿ ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳ ನೇಮಕ:–** ಆಯಾಜಿಲ್ಲಾಡಯಟ್ ಪ್ರಾಂಶುಪಾಲರು, ಪರೀಕ್ಷೆಯ ಸುವ್ಯವಸ್ಥಿತವಾಗಿ ನಡೆಯಲು ಪರೀಕ್ಷಾ ಪಾವಿತ್ರ್ಯತೆಯನ್ನುಕಾಪಾಡಲುಯಾವುದೇ ನಕಲು ಹಾಗೂ ಬದಲಿ ಪ್ರಶಿಕ್ಷಣಾರ್ಥಿಗಳು ಪರೀಕ್ಷೆಗೆ ಹಾಜರಾಗದಿರುವಂತೆ, ಎಚ್ಚರವಹಿಸಲು ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳಗಳನ್ನು ರಚಿಸಲಾಗುತ್ತದೆ.
- **ಪರೀಕ್ಷಾಅವ್ಯವಹಾರ:–** ಪರೀಕ್ಷಾ ಅಕ್ರಮಗಳಿಗೆ, ಪರೀಕ್ಷೆಗೆ ಮೊದಲುತಪ್ಪು ಮಾಹಿತಿ ನೀಡುವ ಸಂಸ್ಥೆಯ ಪ್ರಾಂಶುಪಾಲರ ಮೇಲೆ, ಮಂಡಳಿಯು ದಂಡ ವಿಧಿಸುತ್ತದೆ. ಅದೇರೀತಿ ನಾಮಿನಲ್‌ರೋಲ್ ಸಲ್ಲಿಸುವಾಗ, ತಪ್ಪು ಮಾಹಿತಿ ನೀಡಿದಾಗ ಮಂಡಳಿ ದಂಡ ವಿಧಿಸುತ್ತದೆ ಹಾಗೂ ಶಿಸ್ತು ಕ್ರಮಕೈಗೊಳ್ಳುತ್ತದೆ. ಅಲ್ಲದೇ ಪರೀಕ್ಷಾ ಸಮಯದಲ್ಲಿಪ್ರಶಿಕ್ಷಣಾರ್ಥಿ, ಮೇಲ್ವಿಚಾರಕರು, ಪರೀಕ್ಷಾ ಮುಖ್ಯಅಧೀಕ್ಷಕರು ಎಸಗುವ ತಪ್ಪುಗಳಿಗೆ ಮಂಡಳಿ ದಂಡ ವಿಧಿಸುತ್ತದೆ ಮತ್ತು ಶಿಸ್ತುಕ್ರಮಕೈಗೊಳ್ಳುತ್ತದೆ. ಪರೀಕ್ಷಾಕಾರ್ಯವಾದ ನಂತರ ಮೌಲ್ಯಮಾಪನ ಸಮಯದಲ್ಲಿ ಗಮನಕ್ಕೆ ಬರುವ ಕೆಲವೊಂದು ಲೋಪದೋಷಗಳು, ತಪ್ಪುಗಳಿಗೆ ಆಯಾ ಪರೀಕ್ಷಾ ಮುಖ್ಯಅಧೀಕ್ಷಕರು, ಮೇಲ್ವಿಚಾರಕರಿಗೆ ಮಂಡಳಿ ಶಿಸ್ತುಕ್ರಮ ಕೈಗೊಳ್ಳುತ್ತದೆ. ಸಮಗ್ರ ವಿವರಣೆ (ಅನುಬಂಧದಲ್ಲಿ ನೀಡಲಾಗಿದೆ)
- **ಮೌಲ್ಯಮಾಪನ ಪ್ರಕ್ರಿಯೆ:–**ರಾಜ್ಯದ ಸರ್ಕಾರಿ, ಅನುದಾನಿತ ಮತ್ತುಅನುದಾನರಹಿತಪೂರ್ವಪ್ರಾಥಮಿಕ ಶಿಕ್ಷಕರ ತರಬೇತಿಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಉಪನ್ಯಾಸಕರ ವಿವರಗಳನ್ನು ಮಂಡಳಿಯು ನೀಡುವ ನಮೂನೆಯಲ್ಲಿ ಸಂಸ್ಥೆಯ ಪ್ರಾಂಶುಪಾಲರು, ಭರ್ತಿ ಮಾಡಿ ಭಾವಚಿತ್ರ ಅಂಟಿಸಿ ದೃಢೀಕರಿಸಿ ಆಯಾಡಯಟ್ ಪ್ರಾಂಶುಪಾಲರಿಗೆ ಕಳುಹಿಸಬೇಕು. ಸಂಸ್ಥೆಯ ಪ್ರಾಂಶುಪಾಲರುಉಪನ್ಯಾಸಕರ ಬಗ್ಗೆ ನೀಡಿರುವ ಮಾಹಿತಿಯು ಸರಿಯಾಗಿರುವುದನ್ನು

ದಾಖಲೆಗಳೊಂದಿಗೆ ಪರಿಶೀಲಿಸಿ, ನೀಡಿರುವ ಮಾಹಿತಿಯು ಸರಿಯಿದೆಯೆಂದು ಖಾತ್ರಿಪಡಿಸಿಕೊಂಡು, ನಮೂನೆಗಳನ್ನು ಡಯಟ್ ಪ್ರಾಂಶುಪಾಲರು ಮೇಲು ಸಹಿ ಮಾಡಿಆಯಾಜಿಲ್ಲೆಯಕ್ರೂಢೀಕೃತ ಮಾಹಿತಿಯನ್ನು ಮಂಡಳಿಗೆ ಕಳುಹಿಸಬೇಕಾಗಿದೆ(ನಮೂನೆ ಮುಂದೆ ನೀಡಲಾಗಿದೆ)

- ಡಯಟ್ ಪ್ರಾಂಶುಪಾಲರಿಂದ ಸಲ್ಲಿಸುವಕ್ರೋಢೀಕೃತ ನಮೂನೆಗಳನ್ನು ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಅವುಗಳನ್ನು ಗಣಕೀಕರಿಸಲಾಗುತ್ತದೆ. ಸೇವಾ ಜೇಷ್ಠತೆಯಾನುಸಾರ, ಉಪಮೌಲ್ಯಮಾಪಕರನ್ನು ಮತ್ತು ಮೌಲ್ಯಮಾಪಕರನ್ನು ಮಂಡಳಿಯು ಪ್ರಶಿಕ್ಷಣಾರ್ಥಿಗಳ ಸಂಖ್ಯೆಗನುಗುಣವಾಗಿ ನೇಮಿಸಿ ಆದೇಶಿಸುತ್ತದೆ. ಮೌಲ್ಯಮಾಪನಕಾರ್ಯಕ್ಕೆ ನೇಮಕಗೊಂಡಉಪನ್ಯಾಸಕರುಕಡ್ಡಾಯವಾಗಿ ಮೌಲ್ಯಮಾಪನಕೇಂದ್ರಕ್ಕೆ ಹಾಜರಾಗಬೇಕಾಗಿದೆ. ಗೈರು ಹಾಜರಾದಲ್ಲಿ ಈ ಕಛೇರಿ ಸುತ್ತೋಲೆ ಸಂಖ್ಯೆ:ಎ7.ಪ.ಮೌ.ಮಾ.ಕ/36/2012–13; ದಿನಾಂಕ:24.12.2012ರನ್ವಯ ಕೆ.ಸಿ.ಎಸ್.ಆರ್(ಸಿಸಿಎ) 1957ರ ನಿಯಮಗಳನ್ವಯ ಶಿಸ್ತು ಕ್ರಮಕೈಗೊಳ್ಳಲು ಮಂಡಳಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. (ಅಧಿಸೂಚನೆಅನುಬಂಧದಲ್ಲಿ ನೀಡಿದೆ)
- ಮೌಲ್ಯಮಾಪನವನ್ನು ಮಂಡಳಿಯು ನಿರ್ಧರಿಸುವ ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.
- **<u>ಫಲಿತಾಂಶ ಪ್ರಕಟಣೆ ಮತ್ತುತೇರ್ಗಡೆ</u>:–ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಯಪ್ರಶಿಕ್ಷಣಾರ್ಥಿಗಳು ತೇರ್ಗಡೆ ಹೊಂದಲು ನಿಗಧಿಪಡಿಸಿರುವ ಅಂಕಗಳು ವಿವರ ಈ ಕೆಳಕಂಡಂತಿರುತ್ತದೆ.**

ಪ್ರಶಿಕ್ಷಣಾರ್ಥಿಗಳು ಬಾಹ್ಯ ವಿಷಯದಲ್ಲಿ ಶೇ.35 ಅಂಕಗಳು ಮತ್ತು ಸರಾಸರಿ ಶೇ.40 ಅಂಕಗಳು ಗಳಿಸಿ ಒಟ್ಟು 400 ಬಾಹ್ಯ ಅಂಕಗಳಿಗೆ 160 ಅಂಕಗಳು ಗಳಿಸಿರಬೇಕು.ಆಂತರಿಕ ವಿಷಯಗಳಲ್ಲಿ ಉತ್ತೀರ್ಣರಾಗಲು ಶೇ.40 ಅಂಕಗಳು ಪಡೆದಿರಬೇಕು.

1.**ವಿಶಿಷ್ಠ ದರ್ಜೆ (Distinction)** - ಶೇಕಡ75ಮತ್ತುಅದಕ್ಕಿಂತ ಮೇಲ್ಪಟ್ಟು.

2.**ಪ್ರಥಮ ದರ್ಜೆ (First)** - ಶೇಕಡ60ಮತ್ತುಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ75 ರೊಳಗೆ.

3.**ದ್ವಿತೀಯ ದರ್ಜೆ (Second)** -ಶೇಕಡ50ಮತ್ತುಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ60 ರೊಳಗೆ.

4.**ಉತ್ತೀರ್ಣದರ್ಜೆ (Pass)** -ಶೇಕಡ40ಮತ್ತುಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ50 ರೊಳಗೆ

- **ಪ್ರಯತ್ನಗಳ ಮಿತಿ:–** ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಗೆ ಪ್ರಯತ್ನಗಳ ಮಿತಿನಿಗಧಿಪಡಿಸಿಲ್ಲ.
- **ಫಲಿತಾಂಶಉತ್ತಮ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದಿಲ್ಲ.**
- **ಫಲಿತಾಂಶ ಪ್ರಕಟಣೆಯಾದ ನಂತರಛಾಯಾ ಪ್ರತಿ, ಮರುಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಮಂಡಳಿ ಅವಕಾಶ ಕಲ್ಪಿಸಿದೆ.**
- **ಅಂಕಪಟ್ಟಿ ವಿತರಣೆ:–**ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಪರೀಕ್ಷೆಯಲ್ಲಿಉತ್ತೀರ್ಣರಾದಪ್ರಶಿಕ್ಷಣಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಜಿಲ್ಲಾ ಶಿಕ್ಷಣ ಮತ್ತುತರಬೇತಿ ಸಂಸ್ಥೆಗಳ ಮುಖಾಂತರವಿತರಿಸಲಾಗುವುದು.

ಅನುತ್ತೀರ್ಣಪ್ರಶಿಕ್ಷಣಾರ್ಥಿಗಳಿಗೆ ಎಂ.ಎಸ್.ಎ(Marks Statement Cum-Application) ಕಳುಹಿಸಲಾಗುವುದು. ಮುಂದೆಪ್ರಶಿಕ್ಷಣಾರ್ಥಿಯು ಪರೀಕ್ಷೆಗೆದುಕೊಂಡಾಗಎಂ.ಎಸ್.ಎಯಲ್ಲಿ ಭರ್ತಿ ಮಾಡಿ ಪರೀಕ್ಷಾಅರ್ಜಿ ಸಲ್ಲಿಸಬೇಕಾಗುತ್ತದೆ.

*********